JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ವಚನಕಾರ್ತಿಯರಲ್ಲಿ: ಹೆಣ್ಣಿನ ಸ್ಥಿತಿಗತಿಗಳು

**ಡಾ.ಸುನಿತಾ ಪಿ.ಮುಲಗೆ**

ಕಾರ್ಯೇಷು ಮಂತ್ರಿ
ಕರುಣೇಷು ದಾಸೀ
ಭೋಜ್ಯೇಷು ಮಾತಾ
ಶಯನೇಷು ರಂಭಾ
ಧರ್ಮಾನುಕೂಲಾ
ಕ್ಷಮಯಾ ಧರಿತ್ರೀ
ಭಾರ್ಯಾಚ
ಪಾಡ್ ಗುಣ್ಯವತೀಹ
ದುರ್ಲಭಾ

ಹೆಣ್ಣು ಪುರುಷನ ಎಲ್ಲಾ ಕಾರ್ಯಗಳಲ್ಲಿ ಸಲಹೆಯನ್ನು ನೀಡುವಳು. ಕುಟುಂಬದಲ್ಲಿ ಎಲ್ಲರ (ದಾಸಿಯಂತೆ) ಸೇವೆ ಮಾಡುವುಳು. ಊಟ ಉಪಚಾರದಲ್ಲಿ ಪ್ರೀತಿಸಿ ತೋರಿಸುವ ಮಾತೆಯಾಗಿ, ಗಂಡನ ಆಸೆಗಳಿಗೆ ಪ್ರತಿಸ್ಪಂದಿಸುವಳು. ಧರ್ಮಕ್ಕೆ ಅನುಕೂಲದಲ್ಲಿಇರುತ್ತಾಳೆ. ಕ್ಷಮೆಯಲ್ಲಿ ಭೂಮಿತಾಯಿಯಷ್ಟೆ ಉದಾರತೆವುಳ್ಳವಳು. ಈ ಆರು ಗುಣಗಳು ಹೆಣ್ಣಿನಲ್ಲಿರುವುದು (ಮಡದಿ) ಅನಿವಾರ್ಯ ಎಂಬಂತೆ ಈ ಸಮಾಜ ಬಿಂಬಿಸಿಕೊಂಡು ಬಂದಿದೆ.

ಹೆಣ್ಣು ಸರ್ವಶಕ್ತಿಯೂ, ಆದಿಶಕ್ತಿಯೂ, ಸಬಲಳು, ಭೂಮಿತಾಯಿಯು, ಕರುಣಾಮಯಿ, ಎಲ್ಲಾ ಅರ್ಹತೆಗಳನ್ನು ಹೊಂದಿರುವಳು ಎಂದು ಮೇಲಿನ ಸ್ತೋತ್ರವು ಹೇಳುತ್ತದೆ. ಹಾಗೆಯೆ ಅವಳು ತನ್ನ ಬದುಕಿನಲ್ಲಿ ಸಮಾಜದ ಹೊರಗು ಮತ್ತು ಒಳಗು ದಿನನಿತ್ಯವು ಅನೇಕ ತೊಂದರೆಗಳಿಗೆ ಗುರಿಯಾಗುತಿದ್ದಾಳೆ . ಅದನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಚರಿತ್ರೆ –ಸಂಸ್ಕೃತಿ-ಸಾಹಿತ್ಯದ ಉದ್ದಕ್ಕೂ ಹೆಣ್ಣಿನ ಸ್ಥಿತಿಗಳನ್ನು ಅವಲೋಕಿಸಿದಾಗ ವಚನಕಾರ್ತಿಯರು ಇತಿಹಾಸದಲ್ಲೆ ತಮ್ಮ ಹಿರಿಮೆಯನ್ನು ಸಾಧಿಸಿದ್ದಾರೆ. ಈ ಹಿನ್ನಲೆಯಲ್ಲಿ ವಚನಕಾರ್ತಿಯರಲ್ಲಿ: ಹೆಣ್ಣಿನ ಸ್ಥಿತಿಗತಿಗಳು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ್ರಾಚೀನ ಕಾಲದ ಮಹಿಳೆಯರು ಯುದ್ಧ ಹೋರಾಟಗಳಲ್ಲಿ ಭಾಗಿಯಾಗಿ ವೀರತ್ವವನ್ನು ಮೆರದವರು. ಹೀಗೆ ಆದಿಕಾಲದಿಂದ ಇಂದಿನವರೆಗೂ ಹೆಣ್ಣು ತನ್ನ ಅದ್ಭುತವಾದ ಶಕ್ತಿಯನ್ನು ಪ್ರತಿಬಿಂಬಿಸುತ್ತಾ ಮುನ್ನಡೆದಿದ್ದಾಳೆ. ಈ ದೃಷ್ಟಿಯಲ್ಲಿ ಬಹುರೂಪಿಯಾದ ಹೆಣ್ಣಿನ ಸ್ಥಿತಿಗತಿಗಳು ಕೌಟುಂಬಿಕ ಸಾಮಾಜಿಕವಾಗಿ ಅನೇಕ ತೊಂದರೆಗಳನ್ನು ಎದುರಿಸಿ ಬಂದಿರುವುದು ಗಮನಾರ್ಹ. ಹೆಣ್ಣಿನ ನಿಲುವು ಗಂಡನ ಚಟುವಟಿಕೆಗಳನ್ನು ಆಧರಿಸಿ ಗ್ರಹಿಸುವುದರಿಂದ ಲೈಂಗಿಕತೆ, ಗರ್ಭಧಾರಣೆ, ತಾಯ್ತನಗಳನ್ನು ಗಮನಿಸಿದಾಗ ಇವು ಸರ್ವೇಸಾಮಾನ್ಯವೆನಿಸಿ ಸಮಾಜದಲ್ಲಿ ಅವಳನ್ನು ಕಡೆಗಾಣಿಸಲಾಗಿದೆ..

ಅನಾದಿ ಕಾಲದಿಂದಲೂ ಹೆಣ್ಣನ್ನು ಅಜ್ಞಾನಿಯಿಂದೆ ಪರಿಗಣಿಸಲಾಗುತ್ತಿರುವ ಈ ಸಮಾಜದಲ್ಲಿ ಅವಳಿಗೂ ಸಮಾನವಾದ ಹಕ್ಕಿದೆ ಎಂಬುದನ್ನು ಸಮಾಜವು ಮರೆತಿರುವುದು ವಿಷಾದನೀಯ. ಆದ್ದರಿಂದ ಹೆಣ್ಣಿನ ಸ್ವತಂತ್ರ್ಯತೆ, ಸಮಾನತೆಯನ್ನು ಉನ್ನತ ಮಟ್ಟಕ್ಕೆ ತರುವ ಮಹತ್ವದ ಕಾರ್ಯ ಮಾಡಬೇಕಾಗಿದೆ.

೧೨ನೇ ಶತಮಾನದ 'ಬಸವ ಚಳುವಳಿ'ಯು ಸ್ತ್ರೀ ಪರವಾಗಿ, ಹೆಣ್ಣಿನ ಅವಶ್ಯಕತೆಗಳ ಬಗ್ಗೆ ಗಮನಹರಿಸಿ ಅನೇಕ ಹೋರಾಟಗಳನ್ನು ಮಾಡಿದರು. ಸ್ತ್ರೀ-ಪುರುಷರ ಲಿಂಗತಾರತಮ್ಯ, ಶೋಷಿತ ವರ್ಗದವರ ದಬ್ಬಾಳಿಕೆ. ಮೂಢನಂಬಿಕೆ, ಜಾತಿ ಪದ್ದತಿ ನಿರ್ಮೂಲನೆ, ರಾಜ್ಯಾಶ್ರಯವನ್ನು ವಿರೋಧಿಸಿ ಎಲ್ಲ ಧರ್ಮದವರನ್ನು ಸಮಾನತೆಯ ದೃಷ್ಟಿಯಿಂದ ಕಾಣಲು ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಸ್ತ್ರೀಯರು ಸಾಹಿತ್ಯವನ್ನು ರಚಿಸುವುದರ ಮೂಲಕ ತಮ್ಮ ಬದುಕಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ಅಭಿವ್ಯಕ್ತ ಪಡಿಸುವ ಮುಖಾಂತರ ತಮ್ಮೊಳಗಿನ ಸೃಜನಶೀಲತೆಯನ್ನು ವಚನಗಳ ಮೂಲಕ ಹೊರಹಾಕಿ ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವುದು ಅವರ ವಚನಗಳಿಂದ ಕಂಡುಬರುತ್ತದೆ.

ವಚನಕಾರ್ತಿಯರಲ್ಲಿ ಹೆಣ್ಣಿನ ಸ್ಥಿತಿಗತಿಗಳು ಶ್ರಮಿಕ ನೆಲೆಯಿಂದ ಮೂಡಿ ಬಂದು ಜನಪರವಾಗಿದೆ. ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಸ್ಥಿತಿಗಳಲ್ಲಿ ನಿಂತು ನವಸಮಾಜ ನಿರ್ಮಾಣ ಮಾಡುವಲ್ಲಿ ಇವರ ವಚನಗಳು ಪೂರಕವಾಗಿವೆ. ಅಕ್ಕಮಹಾದೇವಿ, ಅಕ್ಕಮ್ಮ , ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವ , ಗೊಗ್ಗವ್ವೆ , ದುಗ್ಗಳೆ , ಸತ್ಯಕ್ಕ ಮುಂತಾದ ಪ್ರಮುಖ ವಚನಕಾರ್ತಿಯರು ಭಕ್ತಿ, ಅನುಭಾವ, ಜ್ಞಾನ, ಆಚಾರ, ಸಾಮಾಜಿಕ ವಿಡಂಬನೆ ಮುಂತಾದ ವಿಚಾರಗಳನ್ನು ವಚನಗಳಲ್ಲಿ ನೇರವಾಗಿ ಹೇಳಿರುವುದು ಕಾಣಬಹುದು.

ಅಕ್ಕಮಹಾದೇವಿಯು ವಿವಾಹ ಬಂಧನಕ್ಕೆ ಒಳಪಟ್ಟಿದ್ದರಿಂದ ತನ್ನ ಜೀವನದಲ್ಲಿ ವೈರಾಗ್ಯವನ್ನು ತಾಳಿ ಅಸೆ-ಆಮಿಷಗಳನ್ನು ತೊರೆದು ಹಾಕಿ ಹೆಣ್ಣಿನ ನೋವು ಮಾತ್ತು ಆಧ್ಯಾತ್ಮಿಕ ನಿಲುವುಗಳ ಚಿಂತನೆಯು ಅವಳ ವಚನಗಳಲ್ಲಿ ಮೂಡಿಬಂದಿವೆ.

"ಹೆಣ್ಣು ಹೆಣ್ಣಾದಡೆ ಗಂಡಿನಸೂತಕ

ಗಂಡು ಗಂಡಾದಡೆ ಹೆಣ್ಣಿನಸೂತಕ

ಮನದಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?

ಅಯ್ಯಾ, ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ

ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗುರುವಂಗೆ

ಜಗವೆಲ್ಲ ಹೆಣ್ಣು ನೋಡಾ ಅಯ್ಯಾ"

(ಶಿ.ವ.ಸಂ.ವ.೪೨೯. ಪು. ೧೨೯)

ಸಮಾಜದ ಎಲ್ಲ ಸಂಬಂಧಗಳನ್ನು ಕಳೆದುಕೊಂಡು ಜೀವನವನ್ನು ತ್ಯಜಿಸಿ ಬದುಕುವುದು ಕಷ್ಟವಾಗಿದ್ದರು. ಎಲ್ಲಾ ಪರಿಸ್ಥಿತಿಗಳನ್ನು ಸಹಿಸಿಕೊಂಡು ಸಮಾಜದ ಎದುರು ನಿಂತುಕೊಂಡು, ತನ್ನ ಅನುಭವದ ಮಾತುಗಳನ್ನು  ವಿಸ್ತರಿಸುತ್ತಾಳೆ. ಹೆಣ್ಣು-ಗಂಡಿನ ಮಧ್ಯೆ ಇರುವ ಸೂತಕವನ್ನು ಅಲ್ಲಗಳೆಯುತ್ತಾಳೆ. ಸೂತಕದ ಬೆಲಿಯೋಳಗೆ ಹೆಣ್ಣನ್ನು ಬಂಧಿಸಿ,  ಸೂತಕ ಇರುವುದು ಮನಸ್ಸಿಗೆ ಸಂಭದಿಸಿದ್ದು. ಹೊರತು ದೇಹಕ್ಕೆ ಯಾವುದೇ ಸೂತಕ ಇರುವುದಿಲ್ಲ ಎಂದು ತಿಳಿಹೇಳುತ್ತಾಳೆ. ವೈಯಕ್ತಿಕ ಸ್ವಾಯತ್ತತೆಯನ್ನು ಹೇಳುವ ಅಕ್ಕ ಅನೇಕ ವಚನಗಳಲ್ಲಿ ಮದುವೆ ಎಂಬ ಸಂಸ್ಥೆಯನ್ನು ನಿರಾಕರಿಸಿದ್ದಾಳೆ. ಗಂಡ ,ಮದುವೆ ,ದಾಂಪತ್ಯದ ಪರಿಕಲ್ಪನೆಯನ್ನು ಮುರಿದು ಕತ್ತುವುದಕ್ಕೆ ಪ್ರಯತ್ನಿಸಿದಂತಿದೆ

ಇನ್ನೊಂದು ವಚನದಲ್ಲಿ ತನ್ನ ಸ್ವಾಭಿಮಾನ ಹಾಗು ಧೈರ್ಯದ ಮಾತುಗಳನ್ನು ವ್ಯಕ್ತಪಡಿಸುತ್ತಾಳೆ.

"ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು

ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು

ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು

ಶಯನಕ್ಕೆ ಹಾಳು ದೇಗುಲಗಳುಂಟು

ಚೆನ್ನಮಲ್ಲಿಕಾರ್ಜುನಯ್ಯಾ

ಆತ್ಮ ಸಂಗಾತಕ್ಕೆ ನೀನೆನಗುಂಟು"

(ಶಿ.ವ.ಸಂ.ವ. ೪೧೩ ಪು. ೧೨೪ )

ಅಕ್ಕಮಹಾದೇವಿಯು ಜನರ ನಿಂದನೆಗಳಿಗೆ ಕಿವಿಕೊಡದೆ ಸಹಾನುಭೂತಿಯಾಗಿ ಸಮಾಜದಲ್ಲಿ ಮುಚ್ಚುಮರೆಯಿಲ್ಲದೆ ನಿಚ್ಚಳವಾಗಿ ಸಂಚರಿಸಿದ ಮಹಿಳೆಯಾಗಿದ್ದಾಳೆ. ಸ್ತ್ರಿಯಾದವಳು ಯಾರ ಹಂಗಿಲ್ಲದೆ ಬದುಕನ್ನು ಕಟ್ಟಿಕೊಳುವ ಇಂಥಹ ಧೈರ್ಯದ ಮಾತುಗಳನ್ನು ಈ ವಚನವು ತಿಳಿಸುತ್ತದೆ. ಹಸಿವು. ಬಾಯಾರಿಕೆ, ಇವು ಸ್ವಭಾವಿಕವಾದುದು. ಇವುಗಳನ್ನು ಹಿಂಬಾಲಿಸಿ ಬದುಕಿನ ನೈಜ ಸ್ವರೂಪವನ್ನು ನಾವು ಮರೆಯುತ್ತಿದೇವೆ.ಮದುವೆ ಎಂಬ ಸಂಸ್ಥೆ ನಿರಾಕರಿಸುವವುದರ ಜೊತೆಗೆ ಪರ್ಯಾಯವನ್ನು ಪ್ರತಿಪಾದಿಸಿದ್ದಾಳೆ.ಇನ್ನೊಂದು ನೆಲೆಯಲ್ಲಿ ಹೇಳುವುದಾದರೆ, ತನ್ನ ಇಷ್ಟ ದೈವ ಮಲ್ಲಿಕಾರ್ಜುನ ಭಕ್ತಿ ಎಂದು ಗುರುತಿಸಬಹುದಾಗಿದೆ. ಈ ವಚನದಿಂದ ಪ್ರಸ್ತುತವಾಗಿ ಗಮನಿಸುವದಾದರೆ ಇಂದು ಮನೆ, ಆಸ್ತಿ-ಪಾಸ್ತಿ, ಎನ್ನುತ ಇರುವ ಸಂಭದಗಳನ್ನು ಕಳೆದುಕೋಳ್ಳುತ್ತಿದೇವೆ. ಇದರಿಂದ ಪ್ರಿತಿ ನಂಬಿಕೆಗಳು ಕಡಿಮೆಯಾಗಿ ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಪ್ರಾಕೃತಿಕವಾಗಿ ಮನುಷ್ಯನಿಗೆ ಮೊಲಭೂತ ಸೌಕರ್ಯಗಳಿಗಿಂತ ಹೆಚ್ಚಿನದನ್ನು ಆಸೆ ಪಡುತ್ತ ಮರುಗುತ್ತಿದಾನೆ. ಆದ್ದರಿಂದ ಈ ವಚನದ ಅರ್ಥದಂತೆ ಬೇಕಾಗಿರುವದನ್ನು ಪಡೆದು ಬೆಡವಾಗಿರವದರ ಹಿಂದೆ ಸಾಗದೆ ಸಹಜವಾಗಿ ಬದುಕುವ ರೀತಿಯನ್ನು ಈ ವಚನವು ತಿಳಿಸಿಕೊಡುತ್ತದೆ.

ಆಯ್ದಕ್ಕಿ ಲಕ್ಕಮ್ಮ ತನ್ನ ವಚನದಲ್ಲಿ ಕಾಯಕದಲ್ಲಿ ನಿಷ್ಠೆಯನ್ನು ವಿವರಿಸುತ್ತಾಳೆ. ತಾನು ಕಾಯಕದ ಜೊತೆಗೆ ಗಂಡನೊಂದಿಗೆ ಎಲ್ಲಾ ಕಾರ್ಯಗಳಲ್ಲಿ ಭಾಗಿಯಾಗಿ ಕಷ್ಟ-ಸುಖವನ್ನು ಹಂಚಿಕೊಂಡುವಳು, ಗಂಡು-ಹೆಣ್ಣಿನ ನಡುವೆ ಇರುವ ವ್ಯತ್ಯಾಸ ಮತ್ತು ಹೆಣ್ಣಿನ ಸ್ಥಿತಿ ಯಾವ ರೀತಿಯಾಗಿದೆ ಎನ್ನುವುದನ್ನು ವಿಶ್ಲೇಷಿಸುತ್ತಾಳೆ

"ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ

ಅರಿವಿಂಗೆ ಬೇರೊಂದೊಡಲುಂಟೆ?

ಬೇರೊಂದಡಿಯಿಡದಿರು,

ಮಾರಯ್ಯಪ್ರಿಯ ಅಮಲೇಶ್ವರಲಿಂಗವನರಿಯಬಲ್ಲಡೆ."

(ಶಿ.ವ.ಸಂ.ವ. ೫ ಪು. ೨೨೦.)

ಸತಿ ಪತಿ ಎಂಬ ನಾಮವು ಪ್ರಕೃತಿ ನಿಮಿತ್ಯವಾದರ, ಹೆಣ್ಣು ಗಂಡಿನ ನಡುವೆ ಯಾವುದೇ ವ್ಯತ್ಯಾಸವೂ ಕಾಣದೆ: ಅವರ ಮಧ್ಯೆ ಬೇರೆಯಾವ ವಿಷಯವಿಲ್ಲವೆಂದು ಪ್ರಸ್ತುತಪಡಿಸುತ್ತಾಳೆ. ಇಬ್ಬರ ಆತ್ಮ, ದೇಹ, ಶಕ್ತಿ ಒಂದೇಯಾಗಿರುವುದೆಂದು ನುಡಿಯುತ್ತಾಳೆ.. ಈ ಮೂಲಕ ಹೆಣ್ಣು ಬರಿ ಮಕ್ಕಳನ್ನು ಹೆರುವ ಯಂತ್ರವಲ್ಲ ಅವಳು ಪತಿಗೆ ಒಳ್ಳೆಯ ಮಡದಿಯಾಗಿ ಕುಟುಂಬಕ್ಕೆ ಆಧಾರವಾಗಿರುತ್ತಾಳೆ. ಸತಿಪತಿ ನಾಮದ ಅರ್ಥವು ಒಂದೆಯಾಗಿರುವುದು ಎಂದು ಇಲ್ಲಿ ತಿಳಿಯಬೇಕಾಗಿದೆ.

ಗೊಗ್ಗವೆಯು ತನ್ನ ವಚನದಲ್ಲಿ ಸ್ತ್ರೀ ಪುರುಷನಷ್ಟೆ ಸರಿಸಮಾನಳು ಎಂಬ ಚಿಂತನೆಯನ್ನು ಈ ವಚನದಲ್ಲಿ ವ್ಯಕ್ತಪಡಿಸುತ್ತಾಳೆ.

"ಮೊಲೆ ಮೂಡಿ ಬಂದಡೆ ಹೆಣ್ಣೆಂಬರು

ಮೀಸೆಕಾಸೆ ಬಂದಡೆ ಗಂಡೆಂಬರು

ಈ ಉಭಯದ ಜ್ಞಾನ ಹೆಣ್ಣೂ ಗಂಡೊ ನಾಸ್ತಿನಾಥ? "

(ಶಿ.ವ.ಸಂ.ವ. ೬ ಪು. ೨೪೭)

ಹೆಣ್ಣಿನ ಸ್ಥಾನಮಾನದ ಅರಿವನ್ನು ಈ ವಚನವು ಸಾರುತ್ತದೆ. ಹೆಣ್ಣು-ಗಂಡೆಂಬ ಭೇದವನ್ನು ತೊರೆದು ಜೈವಿಕ ವ್ಯತ್ಯಾಸವನ್ನು ಬೌದ್ಧಿಕ ಮಟ್ಟಕ್ಕೆ ತರುವ ಯತ್ನವಾಗಿದೆ. ಇಲ್ಲಿ ಹೆಣ್ಣು ಗಂಡು ಇಬ್ಬರು ಸಮಾನರು . ದೈಹಿಕವಾಗಿ ಬದಲಾವಣೆಗಳನ್ನು ಕಂಡರೂ ಪ್ರಕೃತಿಯ ಮುಂದೆ ಇಬ್ಬರು ಪ್ರಬಲರಾಗಿದ್ದಾರೆ ಎಂದು ಹೇಳುತ್ತಾಳೆ.

ನಿಲಮ್ಮಳು ತಾನು ಹೆಣ್ಣು ಜನ್ಮದಲ್ಲಿ ಹುಟ್ಟಿ, ಅವರಲ್ಲಿ ಮುಡುವ ಪ್ರಶ್ನೆಯನ್ನು ಈ ಒಂದು ವಚನದಲ್ಲಿ ಪ್ರತಿಧ್ವನಿಸುತ್ತದೆ.

"ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ

ಪುಣ್ಯವಿಲ್ಲದ ಪಾಪಿಯ?

ನಾನು ಇರಪರಕ್ಕೆ ದೂರಳಯ್ಯಾ

ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ

ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ

ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ

ಎನಗೆ ಹೆಣ್ಣು ನಾಮವಿಲ್ಲವಯ್ಯಾ."

ಪುಣ್ಯವಿಲ್ಲದ ಪಾಪಿಯ?

ನಾನು ಇರಪರಕ್ಕೆ ದೂರಳಯ್ಯಾ

ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ

ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ

ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ

ಎನಗೆ ಹೆಣ್ಣು ನಾಮವಿಲ್ಲವಯ್ಯಾ."

(ಶಿ.ವ.ಸಂ.ವ ೧೨೦ ಪು. ೨೮೪)

ನೀಲಮ್ಮನ ವಚನದಲ್ಲಿ ಹೆಣ್ಣಾಗಿ ಹುಟ್ಟಿದರಿಂದ ಬದುಕಿನ ಉದ್ದಕ್ಕೂ ಬರಿ ಕಷ್ಟ ನೊವುಗಳೆ ಅಂಟಿಕೊಂಡು ಬಳಲುವರ ಮಹಿಳೆಯರ ಬದುಕಿಗೆ ಪೂರಕವಾಗಿದೆ. ಹೆಣ್ಣಾಗಿ ಜನಿಸಿದ್ದು; ಹಿಂದಿನ ಜನ್ಮದ ಪಾಪದ ಕರ್ಮವೆ? ಎಂದು ಕೇಳುತ್ತಾಳೆ. ಪರಲೋಕದಲ್ಲಿ ಹೆಣ್ಣಿಗೆ ಯಾವ ಸ್ಥಾನವು ದೊರೆಯಲಾರದು, ತಾನು ಪರನ ಹೆಂಡತಿಯಾಗಿದ್ದರಿಂದ ತನಗೆ ಹೆಣ್ಣು ಎಂಬ ಹೆಸರು ಬಂದಿತು . ಹೆಣ್ಣಾಗಿ ಹುಟ್ಟಿದಕ್ಕೆ ಅವಳದೆ ಆದ ಯಾವ ಸ್ಥಾನಮಾನಗಳು ದೊರೆಯಲಾರವೆ? ಎಂದು ಪ್ರಶ್ನೆಯನ್ನು ಮಾಡುತ್ತಾಳೆ.

ಸಂಕವ್ವೆಯ ಈ ಕೆಳಗಿನ ವಚನವು ಅವಳ ಪ್ರಮಾಣಿಕತೆಯನ್ನು ಸ್ಪಷ್ಟಪಡಿಸುತ್ತದೆ.

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ

ಹಿಡಿದಡೆ ಬತ್ತಲೆ ನಿಲಿಸಿ ಕೊಲ್ಲುವರಯ್ಯ

ವ್ರತಹೀನನನರಿದು ಬೆರೆದಡೆ

ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯ

ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ "

(ಶಿ.ವ.ಸಂ.ವ.೧ ಪು. ೩೭೪)

ಯಾವುದೇ ಕಾಯಕ ಮಾಡಿದರೂ ಪ್ರಾಮಣಿಕತೆ ಮತ್ತು ನೀತಿಯಿಂದ ಮಾಡಬೇಕು ಎಂದು ತನ್ನ ವೃತ್ತಿ ಕೆಲಸದ ಕುರಿತು ಅಸಹ್ಯ ಪಡೆದುಕೊಳ್ಳದೆ ನಿರ್ಭಯವಾಗಿ ಮೇಲಿನ ಮಾತುಗಳನ್ನಾಡುತ್ತಾಳೆ. ಸಂಕವ್ವೆಯ ಇದು ಒಂದು ವಚನ ದೊರೆತ್ತಿದ್ದು, ಆ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿಗತವಾಗಿರುವ ಕ್ರೂರ ಶಿಕ್ಷೆಯ ಕುರಿತು ಇ ವಚನದಲ್ಲಿ ಉಲ್ಲೆಖಿಸಿದ್ದಾಳೆ.

ವಚನಕಾರ್ತಿ ಸತ್ಯಕ್ಕ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹ ಕಾರ್ಯಗಳನ್ನು ಮಾಡಬಾರದೆಂಬ ಸಂದೇಶವನ್ನು ಕೆಳಗಿನ ವಚನದ ಮೂಲಕ ಹೇಳುತ್ತಾಳೆ.

"ಲಂಚವಂಚನಕ್ಕೆ ಕೈಯಾನದಭಾಷೆ

ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ

ನಾನು ಕೈ ಮುಟ್ಟಿ ಎತ್ತಿದೆನಾದರೆ

ನಿಮ್ಮಾಣೆ ನಿಮ್ಮ ಪ್ರಮಥರಾಣೆ.

ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ

ಇಂತಲ್ಲದೆ ನಾನು ಆಳಿಮನವ ಮಾಡಿ

ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,

ನೀನಾಗಲೆ ಎನ್ನ ನರಕದಲ್ಲಿ ಅದ್ದಿ

ನೀನೆದ್ದು ಹೋಗಾ ಶಂಭುದಕ್ಕೇಶ್ವರಾ"

(ಶಿ.ವ.ಸಂ ವ. ೨೪ ಪು.೩೭೧)

ಪೂರ್ವಾರ್ಜಿತ ಆಸ್ತಿಯನ್ನು ಕೂತು ತಿನ್ನದೆ, ಶ್ರಮಪಟ್ಟು ದುಡಿದಾಗ ಬದುಕಿಗೆ ಒಂದು ಅರ್ಥಬರುತ್ತದೆಂದು ಹೇಳುತ್ತಾಳೆ. ಹೊನ್ನು, ವಸ್ತ್ರ ಬಿದ್ದರೂ ಅವುಗಳಿಗೆ ಆಸೆ ಪಡದೆ ಸತ್ಯನಿಷ್ಠೆಯಿಂದ ಬದುಕುವ ಮಾರ್ಗವನ್ನು ಕಲಿಸಿಕೊಟ್ಟವಳಾಗಿದ್ದಾಳೆ.

ಪ್ರಸ್ತುತ ಸಂದರ್ಭದಲ್ಲಿ ಹೆಣ್ಣು ಸ್ತ್ರೀ ಪುರುಷನ ಗುಲಾಮಳಲ್ಲ. ಪುರುಷರಷ್ಟೆ ಹಕ್ಕು ಆದ್ಯತೆಗಳು ಸ್ತ್ರೀಗೂ ಕೊಡಬೇಕಾಗಿದೆ. ಸ್ತ್ರೀ-ಪುರುಷರಲ್ಲಿ ಸಮಾನತೆ ಇದೆ ಎಂದು ನಿರೂಪಿಸಬೇಕಾಗಿದೆ. ಕೌಟುಂಬಿಕ ಜವಾಬ್ದಾರಿಯ ಹೊಣೆಯು ಸ್ತ್ರೀಗೆ ಮಾತ್ರ ಸೀಮಿತವಾಗದೆ ಕುಟುಂಬದ ಪ್ರತಿಯೊಬ್ಬರಿಗೂ ಹಂಚಿಕೆಯಾಗಬೇಕು. ಹಾಗೆಯೇ ಇಂದು ಹೆಣ್ಣಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿಯೂ ಮನೆಯಿಂದ ಸಮಾಜದವರೆಗೂ ತನ್ನ ಬದುಕಿನ ಸ್ವಾತಂತ್ರ್ಯವನ್ನು ಹೊಂದಿದ್ದಾಳೆ. ಸಮಾಜದಲ್ಲಿ ಪುರುಷನಷ್ಟೆ ಸರಿಸಮಾನವಾಗಿ ನಿಂತು ಸಮಾನ ಗೌರವ - ಘನತೆಗಳಿಗೆ ಅವಳು ಪಾತ್ರಳಾಗಿದ್ದಾಳೆ.

ಒಟ್ಟಾರೆಯಾಗಿ ೧೨ನೇ ಶತಮಾನದ ಹೆಣ್ಣಿನ ಸ್ಥಿತಿಗತಿಗಳು ಆಧುನಿಕ ಮಹಿಳೆಯ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. ಹೆಣ್ಣು ಅಸಹಾಯಕಳಲ್ಲ 'ಹೆಣ್ಣು ಸಂಸಾರದ ಕಣ್ಣು' ಎಂಬ ಗಾದೆ ಮಾತನ್ನು ಪ್ರಸ್ತುತ ದಿನಗಳಲ್ಲಿ ಅರ್ಥೈಸಿ, ಹೆಣ್ಣಿನ ಸ್ಥಾನವನ್ನು ಗಟ್ಟಿಯಾಗಿಸಬೇಕಾಗಿದೆ. ಸಮಾಜದ ಅನಿಷ್ಟ ಪದ್ಧತಿಗಳನ್ನು ಕಿತ್ತುಹಾಕಿ ಹೆಣ್ಣಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಅವಕಾಶಗಳು ಒದಗಿಸಬೇಕಾಗಿದೆ. ಇಂದು ಎಲ್ಲ ಕ್ಷೇತ್ರಗಳಲ್ಲಿ ಹೆಣ್ಣು ತನ್ನ ಸಾಧನೆಗಳ ಮೂಲಕ ವಿಶ್ವದಲ್ಲೆ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾಳೆ. ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಪ್ರಮುಖ ರಂಗಗಳಲ್ಲಿ ತನ್ನ ಪ್ರಾತಿನಿಧ್ಯವನ್ನು ತೋರ್ಪಡಿಸಿದ್ದಾಳೆ.

ಪಿತೃ ಸಂಸ್ಕೃತಿಯಿಂದ ನಿರಂತರವಾಗಿ ಅನ್ಯಾಯಕ್ಕೆ ಒಳಗಾದ ಸ್ತ್ರೀಯ ಕುರಿತು ವಚನ ಚಳುವಳಿ ಮಾತಾಡಿದೆ. ಪಿತೃ ಸಂಸ್ಕೃತಿ ಹೆಣ್ಣನ್ನು ನಿಯಂತ್ರಿಸುತ್ತಿತ್ತು. ಅದನ್ನು ವಚನಕಾರ್ತಿಯರು ವಿರೋಧಿಸಿದ್ದಾರೆ. ಅವರು ಬದುಕುತ್ತಿರುವ ಕಾಲಘಟ್ಟದ ವ್ಯವಸ್ಥೆಯ ಜೊತೆಗೆ ಮುಖಾಮುಖಿಯಾಗಿದ್ದಾರೆ. ಹೆಣ್ಣಿನ ಮೇಲಿನ ಶೋಷಣೆಯನ್ನು ತಮ್ಮ ವಚನಗಳ ಮೂಲಕ ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

ವಚನಕಾರ್ತಿಯರಂತೆ ಭಾರತದಾದ್ಯಂತ ಮಹಿಳಾ ಅನುಭಾವಿಗಳು ಹೆಣ್ಣಿನ ಸಂವೇದನೆಯನ್ನು ತಮ್ಮ ಪದಗಳಲ್ಲಿ ವ್ಯಕ್ತಪಡಿಸಿದ್ದಾರೆ. ಉದಾ: ಮಿರಾಬಾಯಿ, ಕಾಶ್ಮೀರದ ಲಲ್ಲೇಶ್ವರಿ ಆಂಡಾಳ್, ಮುಂತಾದವರು.

## ಆಕರ ಗ್ರಂಥಗಳು


1. ವೀರಣ್ಣ ರಾಜೂರ, ಶಿವಶರಣೆಯರ ವಚನ ಸಂಪುಟ (೧೯೯೩)
2. ಡಾ. ಜಯಶ್ರೀ ದಂಡೆ, ಶರಣ ಜೀವನ (೨೦೦೮)
3. ಡಾ. ಶಶಿಕಲಾ ಶಿವಶಂಕರ್, ವಚನಕಾರ್ತಿಯರು: ಮಹಿಳಾ ಸಂವೇದನೆ (೨೦೦೮)